Community Irrigation Wells in Bijapur Taluk

760 SRI B. B. PATIL (Tikota).—Will the Minister for Transport and Minor Irrigation be pleased to state.

(a) the total number of Community Irrigation Wells in Bijapur Taluka ;

(b) whether these wells are constructed only for Scheduled Caste and Schedule Tribes ;

(c) whether the Government proposed to construct such community irrigation wells for other economically backward and landless people also ;

(d) If not, the reasons therefor ?

SRI M. M. J. SADYOJATHA (Minister for Transport and Minor Irrigation).—

(a) Nil.

(b) Does not arise in view of (a)

(c) Minor Irrigation Corporation has been sanctioned by the Government for taking up the Community Irrigation Wells for all the communities, which is yet to start functioning.

(d) This does not arise in view of reply to clause (c) above

ಶ್ರೀ ಬಿ. ಬಿ. ಪಾಟೀಲ್.—ವಿಜಾಪುರ ತಾಲ್ಲೂಕಿನಲ್ಲಿರುವ ಸಮುದಾಯ ನೀರಾವರಿ ಬಾವಿಗಳ ಒಟ್ಟು ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಇಲ್ಲ ಎಂದು' ಹೇಳಿದ್ದಾರೆ. ಅಂತಹ ಸಮುದಾಯ ಭಾವಿಗಳನ್ನು ಆರ್ಥಿಕವಾಗಿ ಹಿಂದುಳಿದ ಹಾಗೂ ಭೂಹೀನ ಜನರಿಗೂ ಸಹ ನಿರ್ಮಿಸಲು ಸರ್ಕಾರದವರು ಉದ್ದೇಶಿಸುವರೆ ಎಂದು ಕೇಳಿದ್ದಕ್ಕೆ (c) Minor Irrigation Corporation has been sanctioned by the Government for taking up the Community Irrigation Wells for all the communities, which is yet to start functioning. ಮೈನರ್ ಇರಿಗೇಷನ್ ಕಾರ್ಪೊರೇಷನ್ ಯಾವಾಗ ಪ್ರಾರಂಭವಾಯಿತು ? ಯಾವ ಲೆವೆಲ್‌ನಲ್ಲಿ ಮಂಜೂರು ಮಾಡುತ್ತೀರಿ ? ಇದುವರೆಗೆ ಏತಕ್ಕೆ ಮಂಜೂರು ಆಗಿಲ್ಲ ?.

ಶ್ರೀ ಕೆ. ಯಂಕಟಪ್ಪ (ತೋಟಗಾರಿಗೆ ಮತ್ತು ಬಂದೀಖಾನೆಗಳ ರಾಜ್ಯಸಚಿವರು ಸಣ್ಣ ನೀರಾವರಿ ಮಂತ್ರಿಗಳ ಪರವಾಗಿ).—ಮೈನರ್ ಇರಿಗೇಷನ್ ಕಾರ್ಪೊರೇಷನ್ ೧೯೭೯ರಲ್ಲಿ ಪ್ರಾರಂಭವಾಗಿ, ಎರಡು ಕಾರ್ಪೊರೇಷನ್ ಇರಬೇಕೆಂದು ಹೇಳಿ ಸರ್ಕಾರ ನಿಲುವು ತೆಗೆದುಕೊಂಡಾಗ, ನಾರ್ತ್, ಸೌತ್ ಎಂದು ಎರಡೂ ಪ್ರಾರಂಭವಾಯಿತು. ಇದಾದ ಮೇಲೆ ಎರಡು ಕಾರ್ಪೊರೇಷನ್ ಇರಬೇಕೆ ಬೇಡವೆ ಎನ್ನುವ ವಿಚಾರ ಪುನರ್ ಪರಿಶೀಲನೆಗೆ ಬಿದ್ದಾಗ ಒಂದೇ ಕಾರ್ಪೊರೇಷನ್ ಮಾಡಬೇಕೆಂದು ವಿಚಾರವಿದೆ. ತಾವು ಕೇಳಿರುವ (ಅ) ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಬಿ. ಬಿ. ಪಾಟೀಲ್.—ಬಿಜಾಪುರ ಜಿಲ್ಲೆ ಬರಗಾಲಕ್ಕೆ ಯಾವಾಗಲೂ ತುತ್ತಾಗುವುದರಿಂದ ಆ ಪ್ರದೇಶಕ್ಕೆ ಸಮುದಾಯ ಭಾವಿಗಳನ್ನು ಮಾಡಿಕೊಡುವುದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಇರಿಗೇಷನ್ ಕಾರ್ಪೊರೇಷನ್ ಸಾಧ್ಯವಾದಷ್ಟು ಚುರುಕಿನಿಂದ ಕೆಲಸ ಮಾಡಬೇಕು. ನಮ್ಮ ಭಾಗದಲ್ಲಿ ಕೆರೆ ನೀರಾವರಿ ಸೌಲಭ್ಯವಿರುವುದಿಲ್ಲ. ಲಿಫ್ಟ್ ಇರಿಗೇಷನ್ ಸೌಲಭ್ಯವಿರುವುದಿಲ್ಲ. ಕೃಷ್ಣಾ ಮೇಲ್ದಂಡೆ ಏನೇ ಯೋಜನೆ ಕೈಗೊಂಡರೂ ನಮ್ಮ ಜಿಲ್ಲೆಗೆ ನೀರಿನ ಸೌಲಭ್ಯ ದೊರೆತಿಲ್ಲ. ನಮ್ಮ ಜಿಲ್ಲೆಯಲ್ಲಿ ಬರಗಾಲ ಪರಿಹಾರ ಮಾಡಬೇಕೆಂದರೆ ಸಮುದಾಯ ನೀರಾವರಿ ಭಾವಿಗಳು ಮತ್ತು ಮೈನರ್ ಟ್ಯಾಂಕ್

ಮೂಲಕ ನೀರಾವರಿ ಸೌಲಭ್ಯ ಕಲ್ಪಿಸಲು ಇರಿಗೇಷನ್ ಕಾರ್ಪೊರೇಷನ್ ಚುರುಕಾಗಿ ಯಾವಾಗ ಕೆಲಸ ಮಾಡುತ್ತದೆ ? ಅದನ್ನು ಖಚಿತವಾಗಿ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಯಂಕಟಪ್ಪ.--- ಕೆಲವು ಮಾಹಿತಿಗಳನ್ನು ಸರ್ಕಾರ ಸಹಕಾರ ಇಲಾಖೆಯಿಂದ ಕೇಳಿದೆ, ಅದು ಬಂದ ತಕ್ಷಣದಲ್ಲಿ ಇರಿಗೇಷನ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದು ಕೆಲಸವನ್ನು ಕೈಗೊಳ್ಳುತ್ತದೆ.

ಶ್ರೀ ಬಿ.ಬಿ. ಪಾಟೀಲ್.—ಕಾರ್ಪೊರೇಷನ್ ಪ್ರಾರಂಭಮಾಡಿ ೪ ವರ್ಷಗಳಾಗಿವೆ ಇನ್ನೂ ಎಷ್ಟು ವರ್ಷ ಪರಿಶೀಲನೆ ಮಾಡುತ್ತೀರಿ? ಕಾರ್ಪೊರೇಷನ್ ಸರಿಯಾಗಿ ಕೆಲಸಮಾಡುವುದಕ್ಕೆ ಆಗದಿದ್ದರೆ ಕ್ಲೋಸ್ ಮಾಡಿಬಿಡಿ. ಯಾವಾಗ ಕೆಲಸ ತೆಗೆದುಕೊಳ್ಳುತ್ತೀರೆಂದೂ ನಿಶ್ಚಯವಾಗಿ ಸದನಕ್ಕೆ ತಿಳಿಸಬೇಕು.

ಶ್ರೀ ಕೆ. ಯಂಕಟಪ್ಪ.--ಆದಷ್ಟು ಜಾಗ್ರತೆ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಎಂ. ಶೇರ್‌ಖಾನ್.—ಮೈನರ್ ಇರಿಗೇಷನ್ ಕಾರ್ಪೊರೇಷನ್‌ಗೂ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೂ ಏನು ವ್ಯತ್ಯಾಸ ? ಅವರವರ ಕೆಲಸವೇನು ದಯವಿಟ್ಟು ತಿಳಿಸಬೇಕು.

ಶ್ರೀ ಕೆ. ಯಂಕಟಪ್ಪ.—ಮೈನರ್ ಇರಿಗೇಷನ್ ಇಲಾಖೆಗೂ ಇರಿಗೇಷನ್ ಕಾರ್ಪೊರೇಷನ್‌ಗೂ ಏನೂ ವ್ಯತ್ಯಾಸವಿಲ್ಲ. ಅವರು ಮಾಡತಕ್ಕ ಕೆಲಸಗಳಲ್ಲಿ ವ್ಯತ್ಯಾಸವಿದೆ.

ಶ್ರೀ ವಿ. ವಿ. ಪತ್ತಾರ್.—ವಿಜಾಪುರ ಜಿಲ್ಲೆಯಲ್ಲಿ ಸಮುದಾಯ ನೀರಾವರಿ ಭಾವಿಗಳನ್ನು ತೆಗೆದು ಕೊಂಡಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ನಮ್ಮಲ್ಲಿ ನೀರಾವರಿ ಇಲಾಖೆಯ ಒಂದು ಬ್ರಾಂಚ್ ಮಾಡಿದರೆ ನೀರಾವರಿಗೆ ಸಂಬಂಧಪಟ್ಟಹಾಗೆ ಹೆಚ್ಚು ಕೆಲಸ ಮಾಡಲು ಅನುಕೂಲವಾಗುತ್ತದೆ. ನಮ್ಮಲ್ಲಿ ಒಂದು ಬ್ರಾಂಚ್ ಮಾಡುವ ಉದ್ದೇಶ ಸರ್ಕಾರದಲ್ಲಿ ಇದೆಯೆ ?

ಶ್ರೀ ಕೆ. ಯಂಕಟಪ್ಪ.--ಈ ಪ್ರಶ್ನೆಗೆ ಆಗಲೇ ಉತ್ತರ ಹೇಳಿದ್ದೇನೆ.

Condition of vacuum cleaners Machines in the Spun Silk Mills, Channapatna

876 SRI D. T. RAMU (Channapatna),— Will the Minister for Law and Parliamentary Affairs, Veterinary and Animal Husbandry be pleased to state.

(a) the period when the vacuum cleaners machines were purchased by the Spun Silk Mills, Channapatna ;

(b) the reasons for not utilising the same so far ;

(c) whether it is in working condition now ?

SRI Y. Ramakrishna (Minister for Law and Parliamentary Affairs and Veterinary and Animal Husbandry) —

(a) It was purchased during the year 1977.

(b) Due to technical reasons there is delay in its installation.

(c) Yes.

ಶ್ರೀ ಡಿ. ಟಿ. ರಾಮು.—ಚನ್ನಪಟ್ಟಣ ಸ್ಪನ್ ಸಿಲ್ಕ್ ಮಿಲ್ಸ್‌ಗಳು ಧೂಳು ತೆಗೆಯುವ ಯಂತ್ರವನ್ನು ಯಾವಾಗ ಕೊಂಡುಕೊಳ್ಳಲಾಯಿತು ಎಂದು ಕೇಳಿದ್ದಕ್ಕೆ ೧೯೭೭ನೇ ಇಸವಿಯಲ್ಲಿ ಕೊಂಡು ಕೊಳ್ಳಲಾಯಿತು ಎನ್ನತಕ್ಕ ಉತ್ತರವನ್ನು ಕೊಟ್ಟಿದಾ ನೆ ಅಂದರೆ ೫ ವರ್ಷ ಕಾಲ ಯಂತ್ರ ಕೆಲಸ